**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :19 ಸಿಡಬ್ಲು :32

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ ಶಿವಾಜಿ ತಳವಾರ |
| ಗಂಡನ ಹೆಸರು | : | ಶ್ರೀ. ಹಣಮಂತ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಪಿ.ಎಸ್. ಐ. ಸಿ. ಐ. ಡಿ. ಅರಣ್ಯ ಸಂಚಾರಿ ದಳ, ಬೆಳಗಾವಿ ಘಟಕ |
| ವಾಸ್ತವ್ಯ | : | ಜಂಗಮವಾಡ, ತಾಲೂಕಾ ಮುದ್ದಬಿಹಾಳ, ಜಿಲ್ಲೆ ಬಿಜಾಪೂರ. |
| ದಿನಾಂಕ | : | 11-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**(ಸಾಕ್ಷಿಯನ್ನು ವಿಡಿಯೋ ಕಾನ್ವರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ಅರಣ್ಯ ಸಂಚಾರಿ ದಳ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಶ್ರೀ. ಶಿವಾನಂದ ರಾಮಪ್ಪ ಅರಿಬೆಂಚಿ ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ. ಎಸ್. ಪಾಟೀಲ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿರತ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ವರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.)**

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 2022 ಏಪ್ರೀಲ ತಿಂಗಳಿಂದ ರಿಂದ 2023 ಜೂನ ವರೆಗೆ ಐಗಳಿ

ಪೋಲಿಸ ಠಾಣೆಯಲ್ಲಿ ಪಿ ಎಸ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 16-09-2022 ರಂದು ಮಧ್ಯಾಹ್ನ 02.30 ರ ಸಮಯಕ್ಕೆ ದೂರುದಾರರಾದ ಸುನಿಲ ಶಂಕರ ಗಾಡಿಒಡ್ಡರ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು, ಠಾಣಾ ಅಪರಾಧ ಸಂಖ್ಯೆ 109/2022 ರಂತೆ ಭಾರತ ದಂಡ ಸಂಹಿತೆ ಕಲಂ 143, ಕಲಂ 147 , ಕಲಂ 148, ಕಲಂ 323, ಕಲಂ 324, ಕಲಂ 506 ಸಹ ವಾಚಕ ಕಲಂ 149 ಮತ್ತು ಪರಿಶಿಷ್ಟ ಜಾತಿ , ಪಂಗಡದವರ ಮೇಲಿನ ದೌರ್ಜನ್ಯ ನಿಷೇದ ಕಾಯಿದೆ ಕಲಂ 3(1)(r) 3(1)(s), 3(2)(v) ರಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದೇನೆ ಮತ್ತು ಅದರ ಬಗ್ಗೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ, ಮೂಲ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ಚಾಸಾಃ 19 ಶ್ರೀ ಎಸ್.ಬಿ. ಚೌಹಾನ ಸಿ. ಪಿ. ಸಿ. ನಂ.3544 ರವರ ಮುಖಾಂತರ ಮಧ್ಯಾಹ್ನ 03.00 ಗಂಟೆಗೆ 3ನೇ ಹೆಚ್ಚುವರಿ ಸತ್ರ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ಮತ್ತು ಅದರ ನಕಲನ್ನು ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟಿದ್ದೇನೆ. ಅದೇ ದಿನ ಪ್ರಕರಣದ ಕಡತವನ್ನು ಕಾಯಿದೆ ಪ್ರಕಾರ ಚಾಸಾಃ 33 ರವರಿಗೆ ನೀಡಿದ್ದೇನೆ. ಸಾಕ್ಷಿಯು ಮೂಲ ದೂರು ಮತ್ತು ಅದರ ಮೇಲಿನ ಹಿಂಬರಹ ಮತ್ತು ಸಹಿಯನ್ನು ಗುರುತಿಸಿದ್ದಾರೆ. ಮೂಾಲ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು , ಅದರ ಮೇಲಿರುವ ಹಿಂಬರಹವನ್ನು ನಿಪಿ-1(ಬಿ) , ಸಾಕ್ಷಿಯ ಸಹಿಯನ್ನು ನಿಪಿ-1 (ಸಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-46 ಎಂದು , ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-46 (ಎ) ಎಂದು ಗುರುತಿಸಲಾಯಿತು.

3. ನಂತರ ದಿನಾಂಕಃ 17-09-2022 ರಂದು ಚಾಸಾಃ 33 ರವರ ಆದೇಶದ ಮೇರೆಗೆ ಪ್ರಕರಣದ ಆರೋಪಿತರ ಪತ್ತೆಗಾಗಿ ನನ್ನ ಸಿಬ್ಬಂಧಿಗಳಾದ ಚಾಸಾಃ 20 ಮತ್ತು ಚಾಸಾಃ 21 ರವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದು, ಆರೋಪಿತರಾದ

1ನೇ ಮಲ್ಲೇಶ  ಮಾಳಿ , 2 ನೇ ಆರೋಪಿ ಸುರೇಶ ಮಾಳ , 3 ನೇ ಆರೋಪಿ ವಿಠ್ಠಲ ಮಾಳಿ ರವರನ್ನು ಸುಟ್ಟಟ್ಟಿ ಕ್ರಾಸದಲ್ಲಿ 07.00 ಗಂಟಗೆ ವಶಕ್ಕೆ ಪಡೆದುಕೊಂಡು  08.00 ಗಂಟೆಗೆ  ಚಾಸಾಃ 33 ರವರ ಮುಂದೆ ವರದಿಯೊಂದಿಗೆ ಹಾಜರು ಮಾಡಿದ್ದೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎನ್ ಎಸ್ ಬಿ. ಕೀಲರಿಂದ**

ಆರೋಪಿ ಪರ ವಕೀಲರು ಗೈರು ಹಾಜರು ಇರುತ್ತಾರೆ  ಆರೋಪಿತರಿಗೆ ಪ್ರಶ್ನೆ ಕೇಳಲು ಅವಕಾಶ ನೀಡಲಾಯಿತು . ಆರೋಪಿತರು ಯಾವುದೇ ಪ್ರಶ್ನೆ ಕೇಳಿರುವುದಿಲ್ಲ. ಆ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.